ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಇದನ್ನು ಭದ್ರಾವತಿ ಸಿಮೆಂಟ್ ಕಾರ್ಖಾನೆಯ ಅಂಗವಾಗಿ ಒಂದು ಕಾರ್ಖಾನೆ ಮಾಡುವ ಅಭಿಪ್ರಾಯವಿದೆಯೇ ಅಥವಾ ಇದಕ್ಕೆ ಬೇರೆ ಒಂದು ಜಾಯಿಂಟ್ ಸ್ಟಾಕ್ ಕಂಪನಿ ಮಾಡಬೇಕೆಂದು ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪೊದಲು ಕಾರ್ಖಾನೆ ಎಲ್ಲ ಸ್ಥಾಪನೆ ಮಾಡಬೇಕೆಂಬುದು ನಿರ್ಧಾರವಾದ ಮೇಲೆ ಭದ್ರಾವತಿ ಕಾರ್ಖಾನೆಯ ಅಂಗವಾಗಿ ಮಾಡಬೇಕೇ ಅಥವಾ ಇನ್ಯಾರಿಗಾದರೂ ಕೊಡಬೇಕೇ ಎನ್ನುವುದನ್ನು ಯೋಚನೆಮಾಡಬಹುದು.

ಶ್ರೀ ಜಿ. ಬಸಪ್ಪ.—ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಖಾನೆಯ ವಿಚಾರವನ್ನು ಸೇರಿಸಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೇರಿಸಿಲ್ಲ.

ಶ್ರೀ ಜಿ. ಬಸಪ್ಪ.—ಸೇರಿಸದೇ ಹೋದ ಮೇಲೆ ಯಾವ ರೀತಿ ಪ್ರಾರಂಭಿಸುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಪ್ರೈವೇಟ್ ಸೆಕ್ಟರ್‌ನಲ್ಲಿ ಸೇರುವುದರಿಂದ ಪಬ್ಲಿಕ್ ಸೆಕ್ಟರ್‌ನಲ್ಲಿ ಸೇರಿಸಿಲ್ಲ, ಅಷ್ಟೆ.

ಶ್ರೀ ಜಿ. ಬಸಪ್ಪ.—ಈ ಕಾರ್ಖಾನೆಯನ್ನು ಸ್ಥಾಪನೆಮಾಡಲಕ್ಕೆ ಸರ್ಕಾರದ ಸಹಾಯ ನೀಡಲು ಅವಕಾಶ ಮಾಡಿಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವಶ್ಯಕತೆ ಇದ್ದರೆ ಸರ್ಕಾರದವರು ಸಹಾಯಕ್ಕೆ ಬರುವುದರಲ್ಲಿ ಯಾವ ಅಭ್ಯಂತರವೂ ಇಲ್ಲ.

Pick-up Channel near Kiragunda Village, Nanjangud Taluk.

Q.—401. Sri M. LINGANNA (Nanjangud).—

Will the Government be pleased to state :—

(*a*) whether an estimate is prepared for the construction of a pick-up canal near Kiragunda Village, Nanjangud Taluk ;

(*b*) since how many years back it is done ;

(*c*) what the total cost of the estimate is ;

(*d*) what the total acreage that would be brought under the plough by this project is ;

(*e*) when the work will be taken up ?

A.—Sri H. M. CHANNABASAPPA (Minister for Industries).—

(*a*) No.

(*b*), (*c*), (*d*) and (*e*) Do not arise.

ಶ್ರೀ ಎಂ. ಲಿಂಗಣ್ಣ.—ಇದಲ್ಲದೆ ಬೇರೆ ಇನ್ನಾವುದಾದರೂ ನೀರಾವರಿ ಯೋಜನೆ ಇದೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಅಣೆಕಟ್ಟು ಎಂದು ಕೇಳಿದ್ದೀರಿ, ಕೆರೆ ಅಲ್ಲ. ಕೆರೆ ವಿಷಯದಲ್ಲಿ ಬೇಕಾದರೆ ಅಂಕಿಅಂಶ ತಿಳಿಸುತ್ತೇನೆ, ಪ್ರಶ್ನೆ ಕೇಳಿ.

Sri M. LINGANNA.—When was the estimate prepared and what is the total cost of the estimate ?

Sri H. M. CHANNABASAPPA.—The total cost of the estimate is Rs. 1.11 lakhs. The estimate is now pending with the Executive Engineer and is under scrutiny.

Sri M. LINGANNA.—What is the total acreage that will be irrigated ?

Sri H. M. CHANNABASAPPA.—About 88 acres will be irrigated.

Sri M. LINGANNA.—Will it be sanctioned early ?

Sri H. M. CHANNABASAPPA.—That depends upon so many other considerations. Anyway, the Government will examine and if it satisfies the condition we will certainly sanction.

Sri M. LINGANNA.—What will be the return ?

Sri H. M. CHANNABASAPPA.—The return is said to be about 3% and the entire thing has not been finalised. Anyway after the finalised figures come to Government, if the conditions are satisfied, it will be sanctioned.

ಶ್ರೀ ಯು. ಎಂ. ಮಾದಪ್ಪ.—ರೆಮ್ಯುನೆರೇಟಿವ್ ಆಗದೆ ಇರುವುದನ್ನೂ ತಿಳಿದುಕೊಂಡು pick-up ಹಾಕುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—Remunerative ಆಗುವುದಿಲ್ಲವೆಂದು ಇವೊತ್ತೇ ತೀರ್ಮಾನಕ್ಕೆ ಬರಬೇಕಾಗಿಲ್ಲ.

Sales-tax on Charaka Silk.

Q.—353. Sri M. RAJASEKHARA MURTHY (Yelandur).—

Will the Government be pleased to state :—

(*a*) whether they are collecting Sales-tax on the sale of Charaka silk from the silk reelers ;

(*b*) whether the silk reelers have submitted any memorandum to the Government for the abolition of the Sales-tax ?

A.—Sri H. M. CHANNABASAPPA (Minister for Industries).—

(*a*) Yes.